Available online at www.elixirpublishers.com (Elixir International Journal)

Linguistics and Translation

Elixir Ling. & Trans. 95 (2016) 42102-42104

ISSN: 2229-712X

# Voice of the Oppressed: Dr. Siddhalingaiah
# ಶೋಷಿತರ ಧ್ವನಿ ಡಾ: ಸಿದ್ಧಲಿಂಗಯ್ಯ

Bullannavar Basusab, ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ, Govt First Grade College Gadag, Karnataka

**ARTICLE INFO**

**Article history:**
Received: 22.April 2016;
Received in revised form:
13 May 2016;
Accepted: 2 June 2016;

**Keywords**
Poems – ಕವಿತೆಗಳು
Dalit – ದಲಿತ
Consciousness - ಪ್ರಜ್ಞೆ
Exploited – ಶೋಷಿತ
Dalit Literature – ದಲಿತ ಸಾಹಿತ್ಯ

**ABSTRACT**

"Holea Madigara Song" is the voice of rebellion against the plight, helplessness, pain of the oppressed buried in the depth of human cruelty. Dr. Siddalingaiah Chose poetry medium to express his anger and anger about the inequalities in the society, Siddalingaiah. "As a Dalit poet, he found pain, suffering and injustice in all walks of life and showed the reality in his poems. Most of his poems that tell the harsh truth stand at the turning point of life. His literary inspiration is the reason for the birth of Dalit literary rebel literature.

"ಹೊಲೆ ಮಾದಿಗರ ಹಾಡು" ಮಾನವನ ಕ್ರೌರ್ಯದ ಆಳದಲ್ಲಿ ಹುದುಗಿರುವ ತುಳಿತಕ್ಕೊಳಗಾದವರ ಅವಸ್ಥೆ, ಅಸಹಾಯಕತೆ, ನೋವಿನ ವಿರುದ್ಧ ಬಂಡಾಯದ ಧ್ವನಿಯಾಗಿದೆ. ಡಾ.ಸಿದ್ದಲಿಂಗಯ್ಯ ಅವರು ಸಮಾಜದಲ್ಲಿನ ಅಸಮಾನತೆಗಳ ಬಗ್ಗೆ ತಮ್ಮ ಸಿಟ್ಟು ಮತ್ತು ಸಿಟ್ಟು ವ್ಯಕ್ತಪಡಿಸಲು ಕಾವ್ಯ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡರು ಸಿದ್ದಲಿಂಗಯ್ಯ. ‘‘ದಲಿತ ಕವಿಯಾಗಿ ಬದುಕಿನ ಎಲ್ಲ ರಂಗಗಳಲ್ಲೂ ನೋವು, ಸಂಕಟ, ಅನ್ಯಾಯಗಳನ್ನು ಕಂಡು ವಾಸ್ತವವನ್ನು ಕವಿತೆಗಳಲ್ಲಿ ತೋರಿಸಿದ ಅವರು ಕಟುಸತ್ಯವನ್ನು ಹೇಳುವ ಬಹುತೇಕ ಕವನಗಳು ಬದುಕಿನ ತಿರುವಿನ ಘಟ್ಟದಲ್ಲಿ ನಿಂತಿವೆ.ಅವರ ಸಾಹಿತ್ಯ ಸ್ಫೂರ್ತಿಯೇ ಕಾರಣ. ದಲಿತ ಸಾಹಿತ್ಯ ಬಂಡಾಯ ಸಾಹಿತ್ಯದ ಹುಟ್ಟು.

© 2016 Elixir All rights reserved.

**1. ಪೀಠಿಕೆ:**

ಡಾ. ಸಿದ್ಧಲಿಂಗಯ್ಯನವರ ಬಹುಪಾಲು ಕವಿತೆಗಳು ಶತ ಶತಮಾನಗಳಿಂದ ಶೋಷಣೆಗೊಳಪಟ್ಟ ತುಳಿತಕ್ಕೆ ಸಿಕ್ಕ ವರ್ಗದ ವೇದನೆ–ಸಂವೇದನೆಗಳ ಅಭಿವ್ಯಕ್ತಿಯ ವಿಶಿಷ್ಟತೆಯನ್ನು ಪಡೆದುಕೊಂಡಿವೆ. ಈ ಕವಿತೆಗಳಲ್ಲಿ ಕಂಡುಬರುವ ಎಚ್ಚರ, ಅಕ್ರೋಶಗಳು ಕನ್ನಡ ಸಾಹಿತ್ಯಕ್ಕೆ ಹಾಗೂ ನೊಂದ ಜನಸಮುದಾಯಕ್ಕೆ ಹೊಸ ಧ್ವನಿಯನ್ನು ಕೊಡುವಲ್ಲಿ ತಮ್ಮದೇ ಆದ ಗಾಂಭೀರ್ಯತೆಯನ್ನು ಮೆರೆದಿವೆ ಎಂದು ಹೇಳಬಹುದು. ಮನುಷ್ಯ ಸಹಜ ಪ್ರಕ್ರಿಯೆಗಳು ಮೇಲು–ಕೀಳು, ನೀಚ–ಅಧಮ ಅಸಮಾನತೆಯ ಅಂಶಗಳ ಅನಾವರಣ ಇವರ ಸಾಹಿತ್ಯದ ಮುಖ್ಯ ಆಶಯವಾಗಿ ಬಂದಿದೆ.

**2. ವಿಷಯ:**

ನವ್ಯಕಾವ್ಯದ ಅವಸಾನ ಕಾಲದಲ್ಲಿ ಹುಟ್ಟಿಬಂದ ಈ ಹಾಡುಗಳಿಗೆ ಸ್ವಂತಿಕೆಯ ಮಹತ್ವದೊಂದಿಗೆ ಐತಿಹಾಸಿಕ ಮಹತ್ವವೂ ಇದೆ. ಆಂತರಿಕ ಒತ್ತಡ ಮತ್ತು ಮಾನಸಿಕ ಪ್ರಕ್ರಿಯೆಗಳ ಸೂಕ್ಷ್ಮಗಳನ್ನು ಎಳೆ ಎಳೆಯಾಗಿ ತಿಳಿಸುವಲ್ಲಿ ಸಿದ್ಧಲಿಂಗಯ್ಯನವರು ಕಾವ್ಯಗಳಲ್ಲಿ ನಾವೀನ್ಯತೆ ತೋರಿದ್ದಾರೆ. ಮಾನವೀಯ ಕ್ರೌರ್ಯಗಳ ಆಳದಲ್ಲಿ ಹುದುಗಿಹೋಗಿರುವ ಮಾನವತೆಯ ಅನೇಕ ವಿವರಗಳು ಜೀವಂತವಾಗಿ ಮನಮಿಡಿಯುವ ಈ ಎಲ್ಲ ಕವಿತೆಗಳು ತತ್ಕಾಲೀನ ಸಾಂಸ್ಕೃತಿಕ ಸ್ಥಗಿತ ಸಂದರ್ಭವನ್ನು ಪಾರುಮಾಡುವ ಚೈತನ್ಯವನ್ನು ಪಡೆದುಕೊಂಡಿರುವ ಮಹತ್ವದ ದಾಖಲೆಯಾಗಿವೆ. ಇಲ್ಲಿಯ ಹಾಡುಗಳು ಎಲ್ಲರಿಗೂ ಒಂದೇ ಬಗೆಯ ಅನುಭವವನ್ನು ನೀಡುವದಿಲ್ಲ.

ಇದು ಓದುವವನು ಸಮಾಜದ ರಚನೆಯಲ್ಲಿ ಎಲ್ಲಿ ನಿಂತಿದ್ದಾನೆ ಎಂಬುದನ್ನು ಅನುಸರಿಸಿ ಬದಲಾಗುತ್ತದೆ. ಬಂಡಾಯದ, ಪ್ರತಿಭಟನೆಯ ಮನೋಸ್ಥೈರ್ಯ ಒಡಮೂಡಿಸುವಲ್ಲಿ ಇವು ಮಹತ್ತರವಾದ ಪಾತ್ರ ವಹಿಸಿವೆ. ದೇಸಿ ನುಡಿಗಟ್ಟಿನ ಸಹಜಸೊಗಡು, ಜನಪದೀಯಗೇಯತೆ ಹಾಗೂ ಈ ಕವನಗಳ ಧಾತಿ, ಧೋರಣೆ, ಶಬ್ದಕೋಶ, ಭಾಷಾವೈಖರಿ ಇಡಿಯಾಗಿ ಕನ್ನಡಕ್ಕೆ ಹೊಸತನವನ್ನು ಒಡಮೂಡಿಸಿವೆ.1 ಇವರ ಅನೇಕ ಕವಿತೆಗಳು ಜನತೆಯ ಮಧ್ಯದಿಂದಲೇ ಎದ್ದ ಸೂಕ್ಷ್ಮ ಪ್ರಜ್ಞೆಯ ಅತೀವಯಾತನೆಯ ಭಯಂಕರಕೋಪದ ಅಚಲವಿಶ್ವಾಸದ ಅಭಿಮಾನದ ಸಹಜ ಪ್ರತಿಕ್ರಿಯೆಗಳು ಅಸಮಾನತೆಯ ವಿರುದ್ಧ ಎತ್ತಿದ

## 1. Introduction

Dr. Siddhalingaiah's poems have acquired the characteristic of expressing the pains and feelings of the oppressed class who have been exploited for centuries. It can be said that the alarm and indignation found in these poems have their own seriousness in giving a new voice to Kannada literature and the aggrieved people. The main aim of his literature has been to reveal the aspects of human natural processes, superior-inferior, inferior-inferior inequality.

## 2. Content

These songs, born in the late epic period, have historical significance along with originality. Siddhalingaiah has shown innovation in poetry in conveying the subtleties of inner stress and mental processes. Many details of humanity embedded in the depth of human actions are alive and all these poems are a significant document that has got the spirit to rescue the contemporary cultural stagnation situation. The songs here will not give the same experience to everyone.

It varies according to where the reader stands in the social structure. These have played a great role in creating a spirit of rebellion and protest. The idiosyncrasy of the desi language, the vernacular nature and the spirit, attitude, vocabulary and idiom of these poems have brought innovation to Kannada.1

Tele: 8861814506
E-mail addresses: bullannavarbasusab@gmail.com

© 2016 Elixir All rights reserved

ಬಂಡಾಯದ ದನಿ ಮೊಟ್ಟಮೊದಲು ಇವರ ಕಾವ್ಯಗಳಲ್ಲಿಯೇ ವ್ಯಕ್ತಗೊಂಡಿರುವದು (ಗಮನಾರ್ಹವಾದುದು) ನಾವು ಗಮನಿಸಬೇಕಾದ ಪ್ರಮುಖ ಅಂಶ.

ಸಾಹಿತ್ಯ ಮತ್ತು ಗೇಯ ಗುಣಗಳ ಸಂಗಮದಿಂದಾಗಿ ಪ್ರೇಮ, ಬಂಡಾಯ, ಶೋಷಣೆ, ಮುಂತಾದ ವಸ್ತುಗಳ ವೈವಿಧ್ಯತೆಯಿಂದಾಗಿ ಓದುಗರನ್ನು ವಿಶಿಷ್ಟ ಬಗೆಯಲ್ಲಿ ಆಕರ್ಷಿಸುವ ಶಕ್ತಿ ಈ ಕವಿತೆಗಳಲ್ಲಿ ನಿಚ್ಚಳವಾಗಿದೆ. ಸಹೃದಯರ ಗುಂಡಿಗೆಯನ್ನು ತಂಪು–ತಲ್ಲಣಗೊಳಿಸುವ; ಚಿಂತನೆ–ಜಾಗೃತಿಗೊಳ್ಳುವ ಸುಂದರ ರಚನೆಗಳು ಈ ಹಾಡುಗಳು ಎಪ್ಪತ್ತರ ದಶಕದ ಸಂದರ್ಭದಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿದ ಕವಿ ಸಹಜ ಜೀವನಾನುಭವದ ಅಭಿವ್ಯಕ್ತಿಗೆ ಪ್ರಾಶಸ್ತ್ಯ ನೀಡಿ ಬರೆಯಲಾರಂಭಿಸಿದರು.

1954 ಫೆಬ್ರುವರಿ 3 ರಂದು ದೇವಯ್ಯ ಮತ್ತು ವೆಂಕಟಮ್ಮನವರ ಮಗನಾಗಿ ತಮ್ಮ ತಾಯಿಯ ತವರೂರಾದ ಬೆಂಗಳೂರ ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲೂಕಿನ ಮಂಚನಬೆಲೆ ಗ್ರಾಮದ ಬಡ ದಲಿತ ಕುಟುಂಬದಲ್ಲಿ ಸಿದ್ಧಲಿಂಗಯ್ಯನವರು ಜನಿಸಿದರು. "ಬಡತನ ಜಾತೀಯತೆಯ ಅಪಮಾನಗಳನ್ನು ಮುಖಾಮುಖಿಯಾಗುತ್ತಲೇ ತಮ್ಮ ಬದುಕಿನ ಸೂಕ್ಷ್ಮತೆಗಳನ್ನು ಅರ್ಥೈಸಿಕೊಂಡು ನೆಲೆ ನಿಂತರು. ಜೀವನದುದ್ದಕ್ಕೂ ಎದುರಾದ ಅನಂತ ಸಮಸ್ಯೆಗಳಿಗೆ ಎದೆಗುಂದದೆ ಸವಾಲಾಗಿ ಸ್ವೀಕರಿಸಿಕೊಂಡ ಸಿದ್ಧಲಿಂಗಯ್ಯನವರು ಆ ಎಲ್ಲ ಸಂಕಟಗಳನ್ನು ಸಮಾಜದಲ್ಲಿಯ ಅನೇಕ ಅಸಮಾನತೆಯ ಅಂಶಗಳನ್ನು ತಮ್ಮ ಸೃಜನಶೀಲ ಪ್ರಜ್ಞೆಯ ಮೂಲಕ ಕಲೆಯಾಗಿಸಿ ತಮ್ಮ ವೈಚಾರಿಕ ಬರಹಗಳ ಮೂಲಕ ಕವನ, ಲೇಖನಗಳು ಮುಖೇನ ಜಾಗೃತಿಯನ್ನು ಮೂಡಿಸಿ ಪ್ರತಿಭಟನೆಯ ಕೂಗನ್ನು ಶೋಷಿತರಿಗೆ ಮೊಟ್ಟ ಮೊದಲು ತಂದು ಕೊಟ್ಟವರು ಇವರೆಂದರೆ ತಪ್ಪಾಗಲಾರದು.2

1975ರಲ್ಲಿ ಪ್ರಕಟಗೊಂಡ 'ಹೊಲೆಮಾದಿಗರು' ಈ ಕವನ ಸಂಕಲನ ಕನ್ನಡ ಭಾಷಾಕ್ಷೇತ್ರಕ್ಕೆ ಅಪರಿಚಿತರಾಗಿದ್ದ ದಲಿತ ಸಂಸ್ಕೃತಿ ಜಗತ್ತನ್ನು ಪರಿಚಯಿಸಿತು. ತುಳಿತಕ್ಕೊಳಪಟ್ಟವರ ಮನದಾಳದ ವೇದನೆ, ಅದಮ್ಯವಾದ ಜೀವನ ರೀತಿ ಜೀವನಪರಮೌಲ್ಯ ಸಾಂಸ್ಕೃತಿಕ ಸಂವೇದನೆ, ಶೋಷಿತ ಸಮುದಾಯದ ಭಾಷಾಸೊಗಡಿನ ಅಂತ:ಕರಣ ಇವರ ಒಟ್ಟು ಕಾರ್ಯದ ಜೀವನ ಸೆಲೆಯಾಗಿದೆ. ಸಾವಿರಾರು ನದಿಗಳು (1979) ಕಪ್ಪಗಾಡಿನ ಹಾಡು (1983) ಹೊಸಕವಿತೆಗಳು ಮೆರವಣಿಗೆ (122) ಕವನ ಸಂಕಲನಗಳಲ್ಲಿ ಎಲ್ಲ ಬಗೆಯ ತಾತ್ವಿಕ ಚಿಂತನೆಗಳನ್ನು ಕಾಣಬಹುದು. ದಲಿತ ಚಳುವಳಿಯ ಮುಖವಾಣಿಯಂತೆ ವ್ಯಕ್ತಗೊಂಡ ಇವರ ಕವಿತೆಗಳ ಅಂತರ್ಯದಲ್ಲಿ ಶೋಷಿತ ವ್ಯವಸ್ಥೆಯ ವಿರುದ್ಧ ಬಂಡಾಯದ ಧ್ವನಿ ಒಡಮೂಡಿರುವದು ಸ್ಪಷ್ಟವಾಗಿ ಕಂಡುಬರುತ್ತದೆ.

ಹೊಲೆ ಮಾದಿಗರ ಹಾಡು, ಏಕಲವ್ಯ ಎಡಬಲ ಊರುಕೇರಿ ಆತ್ಮಕಥನ ಪಂಚಮ, ನೆಲಸಮ, ಗ್ರಾಮದೇವತೆ ವಿದ್ಯಾರ್ಥಿಯಾಗಿದ್ದಾಗಲೇ ಸಮಾಜದಲ್ಲಿನ ಅಸಮಾನತೆಗಳ ಬಗ್ಗೆ ತಮ್ಮೊಳಗೆ ಆಕ್ರೋಶಗೊಂಡ ಸಿದ್ಧಲಿಂಗಯ್ಯ ಸಿಟ್ಟುಕೋಪತಾಪಗಳನ್ನು ವ್ಯಕ್ತಪಡಿಸಲು ಕಾವ್ಯಮಾಧ್ಯಮವನ್ನು ಆಯ್ಕೆ ಮಾಡಿಕೊಂಡರು. ರಾಮಮನೋಹರ ಲೋಹಿಯಾ, ಮಾರ್ಕ್ಸ, ಅಂಬೇಡ್ಕರ ಚಿಂತನೆಗಳ ಸಂಗಮವಾಗಿದ್ದಾರೆ. ಸಾಮಾಜಿಕ ಹೋರಾಟ, ಸಂಘಟನೆ ಮಾಡುತ್ತಾ ದಿನದಲಿತರ ದಮನಿತರ ಶೋಷಿತರ ಧ್ವನಿಯಾಗಿ ಕ್ರಿಯಾಶೀಲ ಬರಹಗಾರ, ಚಿಂತಕರಾಗಿ, ಚಿರಪರಿಚಿತರಾಗಿದ್ದಾರೆ. ಭಾಷೆಯನ್ನು ಸರಿಯಾಗಿ ಬಳಸಿಕೊಳ್ಳುವ ಕವಿ ನವಿರಾದ ಭಾಷಾ ಬಳಕೆಯ ಜೊತೆಗೆ ಸಮಾಜದಲ್ಲಿ ವಾಸ್ತವಾಗಿ ಕಂಡು ಬರುವ ಅನೇಕ ಚಿತ್ರಣಗಳನ್ನು ಮನಮುಟ್ಟುವಂತೆ ವಿಡಂಬನಾತ್ಮಕವಾಗಿ ಚಿತ್ರಿಸುತ್ತಾ ಜನ ಎಚ್ಚೆತ್ತುಕೊಳ್ಳುವ ಸೂಚನೆಗಳನ್ನು ಕವಿ ನೀಡುತ್ತಿರುವದು ಇವರ ಅನೇಕ ಕವನಗಳಲ್ಲಿ ಕಂಡು ಬರುವ ಪ್ರಮುಖ ಅಂಶ.

ಡಿ. ಆರ್. ನಾಗರಾಜರವರು ಗುರುತಿಸುವಂತೆ ಸಿದ್ಧಲಿಂಗಯ್ಯನವರ ಹಾಡು ಒಂದು ಜನಾಂಗವನ್ನು ಕಟ್ಟಿದೆ. ಕೇವಲ ಜೈವಿಕ ಪಾತಳಿಯ ಮೇಲೆ ಜೀವಿಸುತ್ತಿರುವ ಜನಾಂಗಕ್ಕೆ ಒಂದು ಸಾಂಸ್ಕೃತಿಕ ನೆಲೆಯನ್ನು ಕಟ್ಟಿಕೊಟ್ಟಿದೆ. ಈ ಹಾಡು ಕೇವಲ ಒಂದು ಜನಾಂಗದನ್ನಲ್ಲ ವಿಶ್ವದ ಎಲ್ಲ ದಲಿತರನ್ನು ಒಗ್ಗೂಡಿಸುವ ಸಾಮರ್ಥ್ಯವನ್ನು ಪಡೆದಿದೆ. ತನಗೆ ವಿರುದ್ಧವಾದದ್ದರ ಬಗ್ಗೆ ಆಕ್ರೋಶವಿದ್ದರೂ ತನ್ನ ನೋವಿನ ಅನ್ಯೊನ್ಯತೆಯ ಬಗ್ಗೆ ಅಭಿಮಾನವಿದೆ. ಬೇಕೆಂದೆ ಈ ನೋವು ಜೋರಾದ ದನಿಯಲ್ಲಿ ಉತ್ಪ್ರೇಕ್ಷೆಗಳು ತುಂಬಿಸುವ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತ ಬಂದಿರುವದು ಇಲ್ಲಿ ಕಂಡು ಬರುತ್ತದೆಂಬ ಹೇಳಿಕೆ ಗಮನಾರ್ಹವಾದುದು.

Many of his poems have arisen from the midst of the people, the instinctive reactions of the subtle consciousness, the terror, the fear, the disbelief, the admiration, the voice of rebellion raised against inequality, which is first of all expressed in his poems (noticeable).Due to the combination of lyrical and lyrical qualities, the variety of subjects like love, rebellion, exploitation, etc., has the power to attract the readers in a unique way in these poems. Cold-blooded beating of the heart; Thought-provoking beautiful compositions, these songs were written during the seventies by the poet who preferred the expression of natural life experience.

Siddhalingaiah was born on February 3, 1954 to Devaya and Venkatamma in a poor Dalit family in Manchanabele village of Ramanagara taluk in Bangalore rural district, his mother's hometown. "He understood the nuances of his life while facing the insults of poverty and casteism. Siddhalingaiah, who undauntedly accepted the endless problems faced throughout his life as a challenge, turned all those sufferings into art through his creative consciousness and raised awareness through his ideological writings through poetry and articles and brought the cry of protest to the oppressed, cannot be mistaken.2

Published in 1975, 'Holemadigaru' introduced the world to Dalit culture, which was unknown to the Kannada language. The heartache of the oppressed, the irrepressible way of life, the value of life, the cultural sensibility, the integration of the language and culture of the oppressed community is the core of his entire work. Thousands of Rivers (1979) Song of Kappagadi (1983) New Poems Meravanige (122) All kinds of philosophical thoughts can be found in poetry collections. The voice of rebellion against the oppressive system is evident in his poems, expressed as the mouthpiece of the Dalit movement.

Song of Hole Madigara, Ekalavya Edabala Urukeri Atmakathana Panchama, Nelasama, Gramdevate As a student, Siddhalingaiah chose the medium of poetry to express his anger about the inequalities in the society. Rammanohar Lohia, Marx and Ambedkar are confluence of thought. He is well-known as an active writer, thinker, as a voice of the oppressed and oppressed in the social struggle and organization. Along with the gentle use of language by the poet who uses language properly, the most important aspect found in many of his poems is that the poet is giving instructions to wake up the people by satirically depicting many images that are actually found in the society.

D. R. As Nagaraja recognizes, Siddhalingaiah's song has built a nation. A cultural base has been built for a race that lives only on the biological surface. This song has the potential to unite all Dalits of the world, not just one race. Admiration for the intimacy of his pain despite his outrage at his opposite. The statement that why this pain has come to be expressed in a language full of expectations in a loud voice is significant.

ಡಾ. ಸಿದ್ಧಲಿಂಗಯ್ಯನವರ ಈ ಎಲ್ಲ ಕವಿತೆಗಳಲ್ಲಿ ಒಡಮೂಡಿದ ಭಾಷಾ ಬಳಕೆ, ಭಾಷೆಯನ್ನು ಸಂದರ್ಭಕ್ಕೆ ತಕ್ಕಹಾಗೆ ಬಳಸಿಕೊಂಡ ರೀತಿ, ಗೇಯತೆ, ಜಾನಪದೀಯಶೈಲಿ, ಕವಿತೆಗಳ ಗಟ್ಟಿತನವನ್ನು ಹೆಚ್ಚಿಸಿವೆ. ಇವರ ಭಾಷಾವೈಖರಿ ಗಮನಿಸಿದಾಗ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಇದುವರೆಗೂ ಇಂತ ಭಾಷಾಪ್ರಯೋಗದ ರಚನೆ ನಡೆದಿಯೇ ಇಲ್ಲವೆನ್ನಬಹುದಾದಷ್ಟು ಭಿನ್ನವಾದ ತಮ್ಮದೇ ಆದ ಪ್ರಭಾವಿ ಭಾಷೆಯನ್ನು ಸಾಹಿತ್ಯದಲ್ಲಿ, ಕಲಾತ್ಮಕವಾಗಿ ಪ್ರಚುರಪಡಿಸಿರುವುದು ನಮಗೆ ಗೋಚರವಾಗುತ್ತದೆ. ಕಾವ್ಯ ದೀನ–ದಲಿತರ ವಸ್ತು ಚಿತ್ರಣಗಳು ಕವಿಯ ಮೂಲ ಆಶಯಗಳಾಗಿ ಹೊರಹೊಮ್ಮಿವೆ. "ದಲಿತ ಕವಿಯಾಗಿ ಬದುಕಿನ ಸಮಸ್ತರಗಳಲ್ಲಿ, ನೋವು, ನಲಿವು, ಅನ್ಯಾಯವನ್ನು ಕಂಡುಂಡ ಇವರ ನಿರ್ದಾಕ್ಷಿಣ್ಯವಾಗಿ ತಮ್ಮ ಕವನಗಳಲ್ಲಿ ವಾಸ್ತವತೆಯನ್ನು ತೆರೆದು ತೋರಿಸಿದ್ದಾರೆ. ಕಟುಸತ್ಯವನ್ನು ಹೇಳುವ ಇವರ ಬಹುಪಾಲು ಕವಿತೆಗಳು ಬದುಕಿನ ಬಹುಮಹತ್ವದ ತಿರುವಿಗೆ ಒಕ್ಕೊರಲಾಗಿ ನಿಂತಿವೆ ಎನ್ನುವದಲ್ಲಿ ಅತಿಶಯೋಕ್ತಿಯಲ್ಲ ಎಂದು ಹೇಳಬಹುದು.3

ಸಿದ್ಧಲಿಂಗಯ್ಯನವರು ಶೋಷಿತರ ದು:ಸ್ಥಿತಿ, ಅಸಹಾಯಕತೆ, ಸಿಟ್ಟು ಮತ್ತು ಆಕ್ರೋಶಗಳಿಗೆ ತಮ್ಮ ಹೋರಾಟದ ಹಾದಿಗಳ ಮೂಲಕ ಅವರಲ್ಲಿ ಸ್ವಾಭಿಮಾನ ಜಾಗೃತೆ, ಪ್ರತಿಭಟನೆಯ ಕೆಚ್ಚನ್ನು ಮೂಡಿಸುವಲ್ಲಿ ಕಾರಣರಾಗಿರುತ್ತಾರೆ.

ಅವರ ಸಾಹಿತ್ಯ ಇಂದು ದಲಿತ ಸಾಹಿತ್ಯ ಮತ್ತು ದಲಿತ ಚಳುವಳಿಯ ರೂಪ ಪಡೆದು ದಲಿತ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಿದೆ. "ಇಂದು ಅವರ ಕಾವ್ಯವು ದಲಿತ, ರೈತ ಮತ್ತು ಕಾರ್ಮಿಕರ ಹೋರಾಟದ ಹಾಡುಗಳಾಗಿ ಪಂಡಿತಪಾಮರರಿಂದ ಹಿಡಿದು ಅನಕ್ಷರಸ್ತರವರೆಗೂ ತಲುಪಿ ಜನಮನವನ್ನಾಕರ್ಷಿಸಿದೆ.4 ಅವರ ಕವನಗಳ ಕೂಗೂ ಧ್ವನಿರೂಪದ ಕ್ಯಾಸೆಟ್‌ಗಳಲ್ಲಿಯೂ ಪ್ರಚಾ'ರಕ್ಕೆ ಬಂದಿದೆ. ಅವರ ಸಾಹಿತ್ಯ ಸಾಕಷ್ಟು ಚರ್ಚೆ ವಿಮರ್ಶೆಗಳು ನಡೆದಿವೆ. ಆದರೆ ಅವರ ಸಮಗ್ರ ಸಾಹಿತ್ಯದ ಭಾಷಿಕ ಅಧ್ಯಯನ ಇದುವರೆಗೂ ನಡೆದಿಲ್ಲವಾದ್ದರಿಂದ ಪ್ರಸ್ತುತ ಮಹಾಪ್ರಂಬಧದ ಪರಿಮಿತಿಯೊಳಗೆ ಅವರ ಕಾವ್ಯಗಳಲ್ಲಿಯ ಭಾಷಾ ರಚನೆ, ಕಾವ್ಯದಲ್ಲಿಯ ನುಡುಗಟ್ಟು ಭಾಷಾಪದಪ್ರಯೋಗ, ಧ್ವನಿ ಪ್ರಯೋಗ ಹೀಗೆ ಮಹತ್ವದ ಅಂಶಗಳನ್ನು ಅಧ್ಯಯನದ ಮೂಲಕ ವಿವರವಾಗಿ ತಿಳಿಸುವ ಪ್ರಮುಖ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಇವರ ಅವಿರತ ಹೋರಾಟ ಸೃಜನಶೀಲ ಸಾಹಿತ್ಯಕ್ಕೆ ಹತ್ತು ಹಲವು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬಂಡಾಯ ಸಾಹಿತಿ, ದಲಿತ ಕವಿ ಆದರೆ ಅವರ ಸಾಹಿತ್ಯ ಕ್ರಾಂತಿಗೀತೆಗಳ ಮೂಲಕ ಅವರು ಸಾಮಾಜಿಕ ಕಾಳಜಿ, ಬಂಡಾಯ ಮನೋಧರ್ಮದ ಕವಿತೆಗಳು ಜನಮಾಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿವೆ. ಅವರ ಕಾವ್ಯ ಅರಿವಿನ ಆಗರವಾಗಿ, ಜಾಗೃತಿ ಮೂಡಿಸುತ್ತ ದಮನಿತರ ಆಶಾಕಿರಣ ಮಾರ್ಗದರ್ಶನ ಮಾಡುತ್ತಿರುವದು ಸಾಹಿತ್ಯದ ಸತ್ವಕ್ಕೆ ಸಾಕ್ಷಿಯಾಗಿ ನಿಂತಿವೆ ಎಂದು ಹೇಳಬಹುದು.

**3. ಉಪಸಂಹಾರ:**

ದಲಿತರ ಧ್ವನಿಯಾದ ಸಿದ್ಧಲಿಂಗಯ್ಯನವರ ಕಾವ್ಯದ ಪ್ರತಿಭಟನೆಯ ಕಾವು ಸಮಾಜದಲ್ಲಿ ಶೋಷಿತರ, ದಮನಿತರ ಬದುಕಿಗೆ ಜಾಗೃತಿ, ಅರಿವನ್ನು ಮೂಡಿಸುವ ಹಾಗೂ ತಮ್ಮ ಹಕ್ಕುಗಳನ್ನು ಚಲಾಯಿಸುವ ಆತ್ಮಸ್ಥೈರ್ಯವನ್ನು, ಕೆಚ್ಚನ್ನು, ರೋಷವನ್ನು ತುಂಬುವದರ ಮೂಲಕ ದಲಿತ ಸಾಹಿತ್ಯ ಬಂಡಾಯ ಸಾಹಿತ್ಯದ ಹುಟ್ಟಿಗೆ ಕಾರಣವಾಗಿದೆ. ಇವರ ಸಾಹಿತ್ಯದ ಪ್ರೇರಣೆ ಸ್ಫೂರ್ತಿ ಅನೇಕ ದಲಿತಪರ ಸಂಘಟನೆಗಳಿಗೆ ಕಾರಣೀಭೂತವಾಗಿದೆ.

**ಪರಾಮರ್ಶನ ಗ್ರಂಥಗಳು:**


೧. ದಲಿತ ಸಾಹಿತ್ಯ ಪರ್ವ – ಡಾ. ಊರುಕೇರಿ–ಸಿದ್ಧಲಿಂಗಯ್ಯ

೨. ಕನ್ನಡ ದಲಿತ ಸಾಹಿತ್ಯ – ಡಾ. ಮುನಿವೆಂಕಟಪ್ಪ ದಲಿತ ಸಾಹಿತ್ಯ – ಡಾ. ಅರವಿಂದ ಮಾಲಗತ್ತಿ

೩. ಕನ್ನಡ ದಲಿತ ಆತ್ಮಕಥೆಗಳು – ಹೊಂಬಯ್ಯ


The use of language in all these poems of Siddhalingaiah, the way language is used according to the context, lyricism, folk style, have increased the strength of the poems. When we observe his idiom, we can see that he has popularized his own influential language in literature and artistically, which is so different that there has been no such linguistic experiment in the Kannada literary field. The material images of the poor and Dalits in the poem have emerged as the basic aspirations of the poet. "As a Dalit poet, he finds pain, suffering and injustice in all walks of life and shows the reality in his poems. It is not an exaggeration to say that most of his poems that tell the harsh truth stand at the turning point of life.3

Siddhalingaiah is responsible for the plight, helplessness, anger and outrage of the oppressed through his path of struggle, instilling in them self-esteem, awareness and courage of protest.

His literature today has taken the form of Dalit literature and Dalit movement and has contributed to the evolution of Dalit consciousness. "Today, his poetry has reached the attention of the masses from scholars to the illiterate as Dalit, peasant and laborer's struggle songs.4 His poetry has also been popularized in audio cassettes. His literature has been discussed and reviewed a lot. But as the linguistic study of his comprehensive literature has not been done so far, the language structure in his poems within the limits of the present Mahaprambhad. An important effort has been made in this study to explain the important aspects such as speech and phrasing, voice experiment in detail through the study.

He has won over ten awards for his unceasing struggle for creative literature. Rebel literature, Dalit poet but through his literary revolutionary songs, his poems of social concern, rebellious spirit have left an indelible impression on the masses. It can be said that his poetry is a testimony to the essence of literature as it is a source of awareness and guidance to the oppressed.

**3. Conclusion**

The incubating protest poetry of Siddhalingaiah, the voice of Dalits, has led to the birth of Dalit literary rebellion literature by creating awareness, creating awareness for the lives of the oppressed and oppressed in the society and filling them with self-respect, courage and anger to exercise their rights. His literary inspiration inspired many pro-Dalit organizations.

**Reference Books**


1. Dalit Literature Festival - Dr. Urukeri-Siddhalingaiah
2. Kannada Dalit Literature - Dr. Munivenkattapa Dalit Literature - Dr. Aravinda Malagatti
3. Kannada Dalit Autobiographies - Hombaiah